(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್‌ಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರಿ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನು ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿನಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟು 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷ್ಶನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.			ಸೊತ್ತಿನ ಟನ್‌ಗಳು ಹೆಚ್ಚು ಕಡಿಮೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು		19	500	
ಡಿಟೋ	ಶ್ರೀರಂಗಪಟ್ಣ	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ	ಡಿಟೊ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಪೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಆಖ್ಯೆರು ವಳಗಾಗಿ ಫಾಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ತಾರೀಖು 15ನೆ ಸೆಪ್ಟಂಬರ್ 1904.

ಮೈಸೂರು ಡಿಸ್ಟ್ರಿಕ್ಟ್ ಮೈಸೂರು ವುಡ್‌ಯಾರ್ಡ್‌ನಲ್ಲು ಮತ್ತು ನಂಜನಗೂಡು ಡಿಪೋದಲ್ಲು ಸಹಾ ಚೌಬೀನೆ ಸಾಮಾನುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆಂಬ ವಿಷಯದಲ್ಲಿ 1904ನೆ ಮಾರ್ಚ್ಂ 38ನೆ ನಂಬರು ಮೈಸೂರು ಗೆಜೆಟ್ಟಿನ 11ನೆ ಭಾಗದ 543ನೆ ಪುಟದಲ್ಲಿ ಫಾಯಿಷ್ ಮಾಡಿರುವ 15—9—1904ನೆ ಮಾರ್ಚ್ಂ ನೋಟಿಫಿಕೇಷನ್ನು ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.